**ಸಾಕ್ಷಿಯನ್ನು ಪುನಃ ದಿಃ 02.01.2018 ಕರೆಸಿ ಪ್ರಮಾಣ ಮಾಡಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಸಿಎಂ ವಕೀಲರಿಂದಃ**

ತಹಸಿಲ್ದಾರ್‌ರವರ ಕಛೇರಿಯಿಂದ ನನ್ನ ತಾಯಿಗೆ ನೋಟೀಸು ಬಂದ ಬಗ್ಗೆ ನೋಟೀಸಿನ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಹಾಗೂ ಮುನಿಲಕ್ಷಮ್ಮರವರು ತಹಸಿಲ್ದಾರ್‌ರವರಿಗೆ ಕೊಟ್ಟ ಅರ್ಜಿಯ ಸ್ವತಃ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಖಾತೆ ಬದಲಾವಣೆಗೆ ಅರ್ಜಿಯನ್ನು ಕೊಟ್ಟ ಬಗ್ಗೆ ಅರ್ಜಿಯ ಸ್ವಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಖಾತೆ 398ಕ್ಕೆ ತಕರಾರು ಅರ್ಜಿಯನ್ನು ಎಸ್.ಎನ್. ವೆಂಕಟಸ್ವಾಮಿಯರು ಸಲ್ಲಿಸಿದ್ದು ಅದನ್ನು ನಿಪಿ-4 ಎಂದು, ಸರ್ವೇನಂಬರ್ 167ರ ಬಗ್ಗೆ 2 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು 6 ಎಂದು, ಸರ್ವೇನಂಬರ್ 56/17ಪಿಗೆ ಸಂಬಂಧಪಟ್ಟಂತೆ 2 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ7 ಮತ್ತು 8 ಎಂದು, ಸರ್ವೇನಂಬರ್ 55/ಪಿ24ಕ್ಕೆ ಸಂಬಂಧಪಟ್ಟಂತೆ ಒಂದು ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಮುನಿಲಕ್ಷ್ಮಮ್ಮನವರು ದಾವಾ ಆಸ್ತಿ ಸರ್ವೇನಂಬರ್ 171ನ್ನು ಕೊಂಡು ಕೊಂಡು ಬಗ್ಗೆ ಖರೀದಿ ಪತ್ರದ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಒಂದು ಎಂಆರ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ಮುನಿಲಕ್ಷ್ಮಮ್ಮನವರ ಮರಣಕ್ಕೆ ಸಂಬಂಧಪಟ್ಟಂತೆ ಮರಣಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಸದರಿ ಮುನಿಲಕ್ಷ್ಮಮ್ಮನವರು ದಿಃ02.02.2003ರಲ್ಲಿ ಮರಣ ಹೊಂದಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ಅವರ ಮರಣ ನಂತರ ಸದರಿ ಖಾತೆಯನ್ನು ಬದಲಾವಣೆ ಮಾಡಲು ನಾನು ಅರ್ಜಿಯನ್ನು ಕೊಟ್ಟಿದ್ದು ಸದರಿ ಅರ್ಜಿಯ ಪ್ರತಿಯನ್ನು ನಿಪಿ-13 ಎಂದು, ನಮ್ಮ ವಂಶಕ್ಕೆ ಸಂಬಂಧಪಟ್ಟಂತೆ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-14 ಎಂದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತಹ ಖಾತಾ ಹಾಗೂ ಪಟ್ಟಾಪುಸ್ತಕದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು, ನನಗೆ ಹೆಸರಿಗೆ ಪಟ್ಟಾ ಬಂದಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 6 ಕಂದಾಯದ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-17 ರಿಂದ 22 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1 ಆರ್‌ಟಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-23 ಎಂದು,

ದಾವಾ ಆಸ್ತಿಗೆ ಸಂಬಂಧಪಟ್ಟಂತೆ 3 ಕಂಪ್ಯೂಟರೈಸ್ಡ್ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-24 ರಿಂದ 26 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2 ಕಂಪ್ಯೂಟರೈಸ್ಟ್ 2 ಎಂಆರ್‌ನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-27 ಮತ್ತು 28 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-29 ಎಂದು, ಅಸಲು ದಾವೆ ಸಂಖ್ಯೆ:207ರಲ್ಲಿ ಕಾಣಿಸಿರುವ 2ನೇ ದಾವಾ ಅನುಸೂಚಿಯ ಬಗ್ಗೆ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-30 ಎಂದು, ಎಸ್.ಎಂ. ಮುನಿರಾಜಮ್ಮ‌ವರು ದಿ:07.12.1994ರಂದು ಮರಣ ಹೊಂದಿದ ಬಗ್ಗೆ ಮರಣ ಪ್ರಮೂಣಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-31 ಎಂದು, ಖಾತೆ ಸಂಖ್ಯೆ 270ಕ್ಕೆ ಸಂಬಂಧಪಟ್ಟಂತೆ 4 ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-32(ಎ) ಇಂದ (ಡಿ) ಎಂದು, ಸೂಲಿಕುಂಟೆ ಗ್ರಾಮಪಂಚಾಯ್ತಿಯವರು ಸೈಟ್ ನಂ.10ಕ್ಕೆ ನೀಡಿದ 2 ಹಿಂಬರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-33 ಮತ್ತು 34 ಎಂದು, ಖಾತೆ ನಂ.170ಕ್ಕೆ ಸಂಬಂಧಪಟ್ಟಂತೆ 5 ಕಂದಾಯದ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-35 ರಿಂದ 39 ಎಂದು, ಖಾತೆ ನಂ.270ಕ್ಕೆ ಸಂಬಂಧಪಟ್ಟಂತೆ ಸೂಲಿಕುಂಟೆ ಗ್ರಾಮಪಂಚಾಯ್ತಿಯವರು ನನಗೆ ಎರಡು ಹಿಂಬರಗಳನ್ನು ನೀಡಿದ್ದು ಅವುಗಳನ್ನು ನಿಪಿ-40 ಮತ್ತು 41 ಎಂದು, ಖಾತೆ ನಂ.222ಕ್ಕೆ ಸಂಬಂಧಪಟ್ಟಂತೆ ಮುನಿಲಕ್ಷ್ಮಮ್ಮನವರು ತೆರಿಗೆ ಕಟ್ಟಿದ ಬಗ್ಗೆ ತೆರಿಗೆ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-42 ಎಂದು, ಸರ್ವೇನಂಬರ್ 167ಕ್ಕೆ ಸಂಬಂಧಪಟ್ಟಂತೆ 1 ಪಹಣಿಪಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-43 ಎಂದು, ಅಸಲು ದಾವೆ ಸಂಖ್ಯೆ:109/2011ರಲ್ಲಿ 5ನೇ ದಾವಾ ಅನುಸೂಚಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-44 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು : ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾಂದ ಮೂರ್ತಿ)**
**ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**